**ಸಾಕ್ಷಿಗೆ ದಿನಾಂಕಃ24-02-2026 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**:: ಪಾಟೀ ಸವಾಲು :: ವಾದಿ ಪರ ಶ್ರೀ. AA ವಕೀಲರಿಂದ ::**

ಈ ದಾವೆಯನ್ನು ವಾದಿ ಯಾವ ಕಾರಣಕ್ಕೆ ಹೂಡಿರುತ್ತಾರೆ ಎಂದು ನನಗೆ ತಿಳಿದಿರುತ್ತದೆ. ದಾವಾ ಶೆಡ್ಯೂಲ್ ಸ್ವತ್ತಿನ ಬಗ್ಗೆ ನನಗೆ ಮಾಹಿತಿ ಇರುತ್ತದೆ, ಆದರೆ ಅದರ ಅಳತೆ ಬಗ್ಗೆ ನನಗೆ ಗೊತ್ತಿಲ್ಲ. ದಾವಾ ಶೆಡ್ಯೂಲ್ ಸ್ವತ್ತಿನ ಪೂರ್ವಕ್ಕೆ ಪುಟ್ಟಪ್ಪನ ಮನೆ, ಪಶ್ಚಿಮಕ್ಕೆ ರಸ್ತೆ, ದಕ್ಷಿಣಕ್ಕೆ ರಾಜೇಂದರ ಮೊದಲಿಯರ್ ರವರ ಮನೆ ಮತ್ತು ಉತ್ತರಕ್ಕೆ ನನ್ನ ಹೆಂಡತಿಯ ಮನೆ ಇರುತ್ತದೆ ಎಂದರೆ ಸರಿ. ದಾವಾ ಶೆಡ್ಯೂಲ್ ಸ್ವತ್ತನ್ನು ವಾದಿಯು ದಾವಾ assessment number ನಲ್ಲಿ 2 ನೇ ಪ್ರತಿವಾದಿ ಖರೀದಿ ಮಾಡಿದ ಸ್ವತ್ತನ್ನು ಹೊರತುಪಡಿಸಿ ಸೈಯದ್ ರಿಯಾಜ್ ಮತ್ತು ಮಲ್ಲೇಖಾ ಖಾನಂ ಎನ್ನುವವರಿಂದ ಖರೀದಿ ಮಾಡಿರುತ್ತಾರೆ. ವಾದಿಯು ದಾವಾ ಶೆಡ್ಯೂಲ್ ಸ್ವತ್ತನ್ನು 2 ಭಾಗಗಳಾಗಿ ಒಂದೇ ಕ್ರಯಪತ್ರದ ಅಡಿ ಖರೀದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸೈಯದ್ ರಿಯಾಜ್ ಮತ್ತು ಮಲ್ಲೇಖಾ ಖಾನಂ ರವರ ಖಾತೆಯಲ್ಲಿ ಇದ್ದ ಜಾಗವನ್ನೇ ವಾದಿಯು ಖರೀದಿ ಮಾಡಿರುತ್ತಾರೆ ಎಂದರೆ ಸರಿ. ನಾನು ಹಾಗೂ 2 ನೇ ಪ್ರತಿವಾದಿ ವಾದಿಯ ವಿರುದ್ದ ಮಾನ್ಯ 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿ ಶಾಶ್ವತ ನಿರ್ಬಂಧಕಾಜ್ಞೆ ಕೋರಿ ಅಸಲು ದಾವಾ 84/2016 ಮತ್ತು 86/2016 ನ್ನು ಹೂಡಿರುತ್ತೇವೆ ಎಂದರೆ ಸರಿ. ಸದರಿ ದಾವೆಗಳಲ್ಲಿನ ಆಸ್ತಿಗಳು ನಮ್ಮ ಹಾಗೂ 2 ನೇ ಪ್ರತಿವಾದಿಗೆ ಸೇರಿದ ಆಸ್ತಿಗಳೇ ಆಗಿರುತ್ತವೆ ಎಂದರೆ ಸರಿ. ಸದರಿ ದಾವೆಗಳಲ್ಲಿ ನಮ್ಮ ಆಸ್ತಿಗಳ ಮೂಲವನ್ನು ತಿಳಿಸಿ ಸದರಿ ದಾವೆಯನ್ನು ಹೂಡಿರುತ್ತೇವೆ ಎಂದರೆ ಸರಿ. ನಮ್ಮ ಹಾಗೂ ವಾದಿಯ ಆಸ್ತಿಗಳು ಬೇರೆ ಬೇರೆ ಆಗಿರುತ್ತವೆ ಎಂದರೆ ಸರಿ. ನಮ್ಮ ಆಸ್ತಿಗಳ ಮೇಲೆ ವಾದಿಗೆ ಯಾವುದೇ ಹಕ್ಕು ಇರುವುದಿಲ್ಲ ಮತ್ತು ದಾವಾ ಶೆಡ್ಯೂಲ್ ಸ್ವತ್ತುಗಳ ಮೇಲೆ ನಮಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿ. ದಾವಾ ಶೆಡ್ಯೂಲ್ ಸ್ವತ್ತಿನ ಖಾತೆ ಹಾಗೂ ಅದರ ಸ್ವಾಧೀನ ವಾದಿಯ ಬಳಿ ಇರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಆದರೆ ವಾದಿಯು ನಮೂದಿಸಿರುವ ದಾವಾ ಶೆಡ್ಯೂಲ್ ಸ್ವತ್ತಿನ ಅಳತೆ ತಪ್ಪಾಗಿರುತ್ತದೆ ಎಂದು ನುಡಿಯುತ್ತಾರೆ. ಆ ರೀತಿ ವಾದಿಯು ದಾವಾ ಶೆಡ್ಯೂಲ್ ಸ್ವತ್ತಿನ ಅಳತೆ ತಪ್ಪಾಗಿ ತೋರಿಸಿರುತ್ತಾರೆ ಎಂದು ನಾನು ನನ್ನ ಕ್ರಯಪತ್ರದ ಆಧಾರದಲ್ಲಿ ಹೇಳುತ್ತಿದ್ದೇನೆ. ದಾವಾ ಶೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ ವಾದಿಯು ಇ ಖಾತಾ ಪಡೆದಿರುತ್ತಾರೆ ಎಂದರೆ

ನನಗೆ ಗೊತ್ತಿಲ್ಲ. ಸಾಕ್ಷಿಗೆ ದಾವಾ ಶೆಡ್ಯೂಲ್ ಸ್ವತ್ತಿನ ಇ ಖಾತೆಯನ್ನು ತೋರಿಸಲಾಗಿ ಸಾಕ್ಷಿಯು ಅದನ್ನು ನೋಡಿ ಒಪ್ಪಿದ ಕಾರಣ ನಿಪಿ14 ಎಂದು ಗುರುತಿಸಲಾಯಿತು.

ಸಾಮಾನ್ಯವಾಗಿ ಟೌನ್ ಮುನಿಸಿಪಾಲಿಟಿಯಿಂದ ಸ್ವತ್ತಿನ ಎಲ್ಲಾ ದಾಖಲೆಯನ್ನು ಪರಿಶೀಲನೆ ಮಾಡಿದ ನಂತರವೇ ಇ ಖಾತೆ ನೀಡಲಾಗುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ದಾವಾ ಹೂಡುವ ಸಮಯದಲ್ಲಿ ಅವರಿಗೆ ಇ ಖಾತೆ ಇರಲಿಲ್ಲ ಎಂದು ನುಡಿಯುತ್ತಾರೆ. ವಾದಿಯ ಸ್ವತ್ತಿನ ಅಳತೆ ತಪ್ಪಾಗಿರುವ ಬಗ್ಗೆ ನಾನು ಸಂಬಂಧಪಟ್ಟ ಇಲಾಖೆಗೆ ದೂರುಗಳನ್ನು ಸಲ್ಲಿಸಿರುತ್ತೇನೆ. ಸದರಿ ದೂರುಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ಹೇಳುತ್ತಿರುವಂತೆ ಆ ರೀತಿ ಯಾವುದೇ ದೂರನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಶೆಡ್ಯೂಲ್ ಸ್ವತ್ತಿನ ಸ್ವಾಧೀನದಲ್ಲಿ ಅವರ ಕ್ರಯಪತ್ರದ ಅನ್ವಯ ವಾದಿ ಇರುತ್ತಾರೆ ಎಂದರೆ ಸರಿಯಲ್ಲ. ದಾವಾ ಶೆಡ್ಯೂಲ್ ಸ್ವತ್ತಿನಲ್ಲಿ ವಾದಿ ಕಟ್ಟಡ ಪರವಾನಗಿ ಪಡೆದುಕೊಂಡಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿ ಕಟ್ಟಡವನ್ನು ಪರವಾನಗಿ ಪ್ರಕಾರ ವಾದಿ ಕಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. ಅದಕ್ಕೆ ಸಂಬಂಧಪಟ್ಟಂತೆ  ನಾನು ಸಂಬಂಧಪಟ್ಟ ಇಲಾಖೆಗೆ ದೂರನ್ನು ನೀಡಿರುತ್ತೇನೆ. ಸದರಿ ದೂರನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸದರಿ ದೂರಿನ ಅನ್ವಯ ಸಂಬಂಧಪಟ್ಟ ಇಲಾಖೆಯಿಂದ ಯಾವುದೇ ಹಿಂಬರಹ ನೀಡಿರುವುದಿಲ್ಲ.

ಈ ದಾವೆಯು ನಾವು ಹೂಡಿರುವ ದಾವೆಗಳಿಗಿಂತ ಮುಂದೆ ಸಲ್ಲಿಸಲಾಗಿರುತ್ತದೆ ಎಂದರೆ ಸರಿಯಲ್ಲ. ನಾನು ಹಾಗೂ 2ನೇ ಪ್ರತಿವಾದಿ ಹೂಡಿರುವ ದಾವೆಗಳ ಬಗ್ಗೆ ವಾದಿ ತಿದ್ದುಪಡಿ ಮೂಲಕ ವಾದಿ ಈ ದಾವೆಯಲ್ಲಿ ತಿಳಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಶೆಡ್ಯೂಲ್ ಸ್ವತ್ತಿನ ಸ್ವಾಧೀನ ಪ್ರತಿವಾದಿಗಳಾದ ನಾವು ವಾದಿಗಳಿಗೆ ತೊಂದರೆ ನೀಡಿದ ಕಾರಣ ಈ ದಾವೆ ಹೂಡಿರುತ್ತಾರೆ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ದುರುದ್ದೇಶದಿಂದ ಸುಳ್ಳು ತಕರಾರು ಹೂಡಿ ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.  ನಾನು ಹಾಗೂ 2ನೇ ಪ್ರತಿವಾ ಹೂಡಿರುವ ದಾವೆಗಳು ಸುಳ್ಳು ದಾವೆ ಎಂದರೆ ಸರಿಯಲ್ಲ. ನಾನು ಈ ದಾವೆಯಲ್ಲಿ ಹಾಜರುಪಡಿಸಿದ ದಾಖಲೆಗಳು ನನ್ನ ಆಸ್ತಿಗೆ ಸಂಬಂಧಪಟ್ಟಂತೆ  ದಾಖಲೆ ಆಗಿರುತ್ತದೆ ಎಂದರೆ ಸರಿ. ಸದರಿ ದಾಖಲೆಗೂ ಹಾಗೂ ದಾವಾ ಶೆಡ್ಯೂಲ್ ಸ್ವತ್ತಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿ.

**:: ಮರು ವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

sd/-

ಪ್ರಧಾನ ಸಿ.ಜೆ ಮತ್ತು ಜೆ.ಎಂ.ಎಫ್.ಸಿ

ತರೀಕೆರೆ.

ಸಾಕ್ಷಿಯ ಸಹಿ: